(ಕಂದಾಯ ಇಲಾಖೆ)

# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:133/2015-16 ದಿನಾಂಕ:08.09.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1. ಶ್ರೀ ಕುರುಬರ ಗೂಳಪ್ಪ ತಂದೆ ಲೇಟ್ ಕುರುಬರ ಪಂಪಣ್ಣ,
ವಾಸ: ಮೆಟ್ರಿ ಗ್ರಾಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

[ಶ್ರೀ ಕೆ.ಪ್ರಭಾಕರರಾವ್, ವಕೀಲರು, ಹೊಸಪೇಟೆ ]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ತಹಶೀಲ್ದಾರರು, ಹೊಸಪೇಟೆ,
2. ಪಿ.ನೀಲಕಂಠರೆಡ್ಡಿ ತಂದೆ ಪಿ.ರಾಮದಾಸರೆಡ್ಡಿ,
ವಾಸ: ಅಂತ:ಪುರ ಕಾಲೋನಿ, 4ನೇ ಕ್ರಾಸ್, ಎಸ್.ಎನ್.ಪೇಟೆ, ಬಳ್ಳಾರಿ ತಾಲೂಕು ಮತ್ತು ಜಿಲ್ಲೆ.
**[ಪ್ರತಿವಾದಿ-2 ರ ಪರ ವಕೀಲರು, ಶ್ರೀ ಹೆಚ್.ಬಿಡ್ಡಪ್ಪ, ವಕೀಲರು, ಹೊಸಪೇಟೆ ]**
3. ಕುರುಬರ ಈಶ್ವರಮ್ಮ ಗಂಡ ಗೂಳಪ್ಪ,
ವಾಸ: ಎಸ್.ಬಿ.ಎಮ್. ಹತ್ತಿರ, ಆಶ್ರಯ ಕಾಲೋನಿ, 16ನೇ ವಾರ್ಡ್, ಸಿರುಗುಪ್ಪ ಪೋ ಮತ್ತು ತಾಲೂಕು, ಬಳ್ಳಾರಿ ಜಿಲ್ಲೆ.

Sub Divisional Magistrate Hospet ಉಪ ವಿಭಾಗೀಯ ದಂಡಾಧಿಕಾರಿಗಳು, ಹೊಸಪೇಟೆ

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಂಪ್ಲಿ | ಮೆಟ್ರಿ | 162/ಎ/2 | 04ಎಕರೆ72 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಮೆಟ್ರಿ ಗ್ರಾಮದ ಸ.ನಂ.162/ಎ2 ವಿಸ್ತೀರ್ಣ: 04 ಎಕರೆ 72 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ತಕರಾರು/38/2015-16 ದಿನಾಂಕ:23.11.2015 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ಮತ್ತು ಸದರಿ ಕಾಯ್ದೆಯ ಕಲಂ 55 ರಡಿಯಲ್ಲಿ ಪ್ರಶ್ನಿತ ಆದೇಶಕ್ಕೆ ಪ್ರಕರಣ ಇತ್ಯರ್ಥವಾಗುವವರೆಗೆ ತಡೆಯಾಜ್ಞೆಯನ್ನು ಕೋರಿ ಮನವಿಯನ್ನು ವಾದಿಪರ ವಕೀಲರು ದಿನಾಂಕ:14.01.2016 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ಸದರಿ ಪ್ರಶ್ನಿತ ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:11.02.2016ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಪ್ರತಿವಾದಿ-1 ರವರು ಮಾಡಿರುವ ಸದರಿ ಪ್ರಶ್ನಿತ ಹಕ್ಕು ಬದಲಾವಣೆ ಆದೇಶವು ಕಾನೂನು ಬಾಹಿರವಾದುದೆಂದು, ಪ್ರತಿವಾದಿ-1 ರವರು ಪ್ರತಿವಾದಿ-3 ರವರು ಪ್ರತಿವಾದಿ-2 ರವರಿಗೆ ಕ್ರಯಕ್ಕೆ ಕೊಟ್ಟ ಆಧಾರದ ಮೇರೆಗೆ ಸದರಿ ವಿವಾದಿತ ಕ್ರಯ ಪತ್ರದ ಆಧಾರದ ಮೇಲೆ ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಿರುವುದಾಗಿ, ಸದರಿ ಕ್ರಯ ಪತ್ರವು ಪ್ರತಿವಾದಿ-2 ರವರಿಗೆ ಸದರಿ ಜಮೀನಿನ ಮೇಲೆ ಯಾವುದೇ ರೀತಿಯ ಹಕ್ಕನ್ನು ಉಂಟುಮಾಡುವುದಿಲ್ಲವೆಂದು, ಹಾಗೂ ಪ್ರತಿವಾದಿ-3

ರವರಿಗೆ ಸದರಿ ಜಮೀನಿನ ಮೇಲೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲವೆಂದು, ಹಾಗೂ ಇವರ ಪ್ರಕಾರ ಸೃಷ್ಟಿತ ನೋಂದಾಯಿತವಲ್ಲದ ದಾನ ಪತ್ರ ದಿನಾಂಕ:04.01.1989 ರ ಮೂಲಕ ತಮ್ಮ ಹಕ್ಕನ್ನು ಕೇಳುತ್ತಿದ್ದು, ಸದರಿ ಪತ್ರವನ್ನು ಮಾನ್ಯ ಉಚ್ಛನ್ಯಾಯಾಲಯ ಕರ್ನಾಟಕ ಇವರು W.P.No.44179/1995 ದಿನಾಂಕ:29.08.1997 ರ ಮೂಲಕ ತಿರಸ್ಕರಿಸಿರುವುದಾಗಿ, ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಸದರಿ ಪ್ರಕರಣವನ್ನು ಅಪೀಲು ಸಂಖ್ಯೆ:38/92-93 ರಡಿಯಲ್ಲಿ ಕಾನೂನು ಪ್ರಕಾರವಾಗಿ ಮುಕ್ತಾಯಗೊಳಿಸಲು ನಿರ್ದೇಶಿಸಿರುವುದಾಗಿ, ಆದರೆ ಸದರಿ ಆದೇಶವನ್ನು ಪರಿಗಣಿಸದೇ ಪ್ರತಿವಾದಿ-1 ರವರು ಮಾಡಿರುವ ಆದೇಶವು ತಳ್ಳಿ ಹಾಕುವಂತಹದ್ದಾಗಿದ್ದು, ಕಾನೂನುಬಾಹಿರವಾಗಿರುವುದಾಗಿ ತಿಳಿಸಿರುತ್ತಾರೆ ಈ ಬಗ್ಗೆ ಸದರಿ ಆದೇಶದ ಪ್ರತಿಯನ್ನು ಲಗತ್ತಿಸಿರುತ್ತಾರೆ.

ವಾದಿಪರ ವಕೀಲರು ತಮ್ಮ ಅಪೀಲನ್ನು ಅಂಗೀಕರಿಸಿ, ಸದರಿ ಪ್ರಶ್ನಿತ ಆದೇಶವನ್ನು ತಳ್ಳಿಹಾಕುವಂತೆ, ಹಾಗೂ ಮಾನ್ಯ ಉಚ್ಛನ್ಯಾಯಾಲಯ ಕರ್ನಾಟಕ, ಬೆಂಗಳೂರು ಇವರು ನಿರ್ದೇಶಿಸಿರುವಂತೆ ಪ್ರತಿವಾದಿ-1 ರವರಿಗೆ ಪ್ರತಿವಾದಿ-2 ರವರ ಹೆಸರಿನಲ್ಲಿ ಸದರಿ ಜಮೀನನ್ನು ಹಕ್ಕು ಬದಲಾವಣೆ ಮಾಡಬಾರದೆಂದು ನಿರ್ದೇಶನ ನೀಡಲು ಕೋರಿ ಸದರಿ ಅಪೀಲನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಪ್ರತಿವಾದಿ-2 ಪರ ವಕೀಲರು ವಾದಿಗಳ ಎಲ್ಲ ಹೇಳಿಕೆಗಳನ್ನು ತಳ್ಳಿಹಾಕಿದ್ದು, ವಾದಿಗಳು ತಮ್ಮ ಹಕ್ಕಿನ ಬಗ್ಗೆ ಸಾಬೀತುಪಡಿಸಿಕೊಳ್ಳಲು ಪುಷ್ಟೀಕರಿಸುವ ಆಧಾರಗಳನ್ನು ಕಾನೂನು ರೀತಿಯಲ್ಲಿ ಸರಿಯಾಗಿ ಉಲ್ಲೇಖಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರತಿವಾದಿಗಳು ತಮ್ಮ ಹಕ್ಕಿನ ಬಗ್ಗೆ ಈ ಕೆಳಗಿನಂತೆ ಹೇಳಿಕೆ ನೀಡಿರುತ್ತಾರೆ.

1. ಪ್ರತಿವಾದಿ-2 ರವರಾದ ಪಿ.ನೀಲಕಂಠರೆಡ್ಡಿ ತಂದೆ ಪಿ.ರಾಮದಾಸರೆಡ್ಡಿ ಇವರು ಸಿ.ಕರುಣಾಕರ್ ತಂದೆ ಶಿಷ್ಠೇರುದ್ರಪ್ಪ, ಸಿರುಗುಪ್ಪ ಇವರಿಗೆ ದಿನಾಂಕ:20.06.2015 ರಂದು ಜನರಲ್ ಪವರ್ ಆಫ್ ಅಟಾರ್ನಿಯನ್ನು ಕಾರ್ಯಗತಗೊಳಿಸಿರುವುದಾಗಿ ತಿಳಿಸಿರುತ್ತಾತೆ. ಈ ಬಗ್ಗೆ ಜನರಲ್ ಪವರ್ ಆಫ್ ಅಟಾರ್ನಿಯ ಪ್ರತಿಯನ್ನು ಲಗತ್ತಿಸಿರುತ್ತಾರೆ.
2. ವಾದಿಯಾದ ಕುರುಬರ ಗೂಳಪ್ಪ ಇವರಿಗೆ ಸ.ನಂ.73/ಎ ವಿಸ್ತೀರ್ಣ:06 ಎಕರೆ 24 ಸೆಂಟ್ಸ್; ಸ.ನಂ.74/ಎ ವಿಸ್ತೀರ್ಣ:06 ಎಕರೆ 14 ಸೆಂಟ್ಸ್; ಸ.ನಂ.162/ಎ/2 ವಿಸ್ತೀರ್ಣ:04 ಎಕರೆ 72 ಸೆಂಟ್ಸ್ ಜಮೀನುಗಳು ಕರ್ನಾಟಕ ಭೂ ಸುಧಾರಣೆ ಕಾಯ್ದೆಯ ಪ್ರಕಾರ ಭೂ ನ್ಯಾಯ ಮಂಡಳಿ ಪ್ರಕರಣ ಸಂಖ್ಯೆ:LRM.2034/1974ರ ಪ್ರಕಾರ ಪಟ್ಟಾ ನೀಡಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಪಟ್ಟಾ ಪ್ರತಿಯನ್ನು ಲಗತ್ತಿಸಿರುತ್ತಾರೆ.
3. ಪ್ರತಿವಾದಿ-3 ರವರು ಕುರುಬರ ಗೂಳಪ್ಪ ಇವರ ಕಾನೂನುಬದ್ಧವಾಗಿ ಮದುವೆಯಾದ ಪತ್ನಿಯಾಗಿರುವುದಾಗಿ, ವಾದಿಯು ದಿನಾಂಕ:04.01.1989 ರಂದು ದಾನ ದಸ್ತಾವೇಜು ಪ್ರಕಾರ ಪ್ರತಿವಾದಿ-3 ರವರಿಗೆ ಸದರಿ ವ್ಯಾಜ್ಯದ ಜಮೀನನ್ನು ತನ್ನ ಹೆಂಡತಿಯ ಜೀವನಾಂಶಕ್ಕಾಗಿ ನೀಡಿರುವುದಾಗಿ ತಿಳಿಸಿರುತ್ತಾರೆ. ದಾನ ಪಡೆದ ದಿನದಿಂದಲೂ ಪ್ರತಿವಾದಿ-3 ರವರೇ ಸದರಿ ಜಮೀನಿನ ಮೇಲೆ ಹಕ್ಕು ಮತ್ತು ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಪ್ರತಿವಾದಿ-3 ರವರು ಸದರಿ ಜಮೀನಿನ ಮೇಲೆ 2012 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕಂಪ್ಲಿ ಇವರಲ್ಲಿ ಸಾಲವನ್ನು ತೆಗೆದುಕೊಂಡಿರುವುದಾಗಿ, ಸದರಿ ರೂ.1,30,000/- ಗಳ ಸಾಲವನ್ನು ತೀರಿಸಿದ ಬಗ್ಗೆ ದಿನಾಂಕ:02.05.2015 ರಂದು ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕಂಪ್ಲಿ ಇವರಿಂದ ರಸೀದಿಯನ್ನು ಪಡೆದಿರುವುದಾಗಿ, ದಿನಾಂಕ:05.05.2015 ರವರೆಗೆ ಸದರಿ ಜಮೀನಿನ ಮೇಲೆ ಹಕ್ಕು ಮತ್ತು ಸ್ವಾಧೀನಾನುಭವವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಹಣ ಸಂದಾಯ ರಸೀದಿಯ ಪ್ರತಿಯನ್ನು ಲಗತ್ತಿಸಿರುತ್ತಾರೆ.
4. ಪ್ರತಿವಾದಿ-3 ರವರಾದ ಶ್ರೀಮತಿ ಈಶ್ವರಮ್ಮ ಗಂಡ ಕುರುಬರ ಗೂಳೆಪ್ಪ ಇವರು ಪ್ರತಿವಾದಿ-2 ರವರಾದ ಶ್ರೀ ನೀಲಕಂಠರೆಡ್ಡಿ.ಪಿ. ಇವರಿಗೆ ರೂ.5,70,000/- ಗಳಿಗೆ ನೋಂದಾಯಿತ

ಕ್ರಯದಸ್ತಾವೇಜು ಪ್ರಕಾರ ದಿನಾಂಕ:05.05.2015 ರಂದು ಕ್ರಯಕ್ಕೆ ನೀಡಿರುವುದಾಗಿ, ಅಂದಿನಿಂದ ಪ್ರತಿವಾದಿ-3 ರವರೆ ಸದರಿಜಮೀನಿನ ಹಕ್ಕು ಮತ್ತು ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ತದನಂತರದಲ್ಲಿ ಸದರಿ ಕ್ರಯ ಪತ್ರದ ಪ್ರಕಾರತಮ್ಮ ಹೆಸರಿನಲ್ಲಿ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

5. ವಾದಿಗಳು ತಮ್ಮ ಅಪೀಲು ಮೆಮೋದಲ್ಲಿ ಆಪಾದಿಸಿರುವಂತೆ, ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕ, ಬೆಂಗಳೂರು ಇವರು W.P.No:44179/1995 ದಿನಾಂಕ:29.08.1997 ರ ಮೂಲಕ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಸದರಿ ಪ್ರಕರಣವನ್ನು ಪರಿಶೀಲಿಸಿ ಕಾನೂನು ರೀತ್ಯ ಕ್ರಮವಹಿಸಿ ಮುಕ್ತಾಯಗೊಳಿಸಲು ನಿರ್ದೇಶಿಸಿರುವುದಾಗಿ, ಆದರೆ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಪ್ರತಿವಾದಿ-2 ಮತ್ತು 3 ರವರಿಗೆ ಯಾವುದೇ ರೀತಿಯ ನೋಟೀಸನ್ನು ನೀಡಿರುವುದಿಲ್ಲವೆಂದು, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಯಾವುದೇ ರೀತಿಯ ಆದೇಶವನ್ನು ಹೊರಡಿಸಿರುವರೇ? ಎಂದು ಪ್ರಶ್ನಿಸಿದ್ದು ಹಾಗೂ ಪ್ರತಿವಾದಿ-2 ರವರು ಸದರಿ ರಿಟ್ ಪಿಟಿಷನ್‌ನ ಪಕ್ಷಗಾರರಾಗಲೀ, ಅಥವಾ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರು ಪ್ರತಿವಾದಿ-2 ರವರನ್ನು ನಿರ್ಭಂಧಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.
6. ವಾದಿಗಳು ಮಾನ್ಯ ಸಿವಿಲ್ ಜಡ್ಜ್ ಜೆ.ಎಂ.ಎಫ್.ಸಿ. ಹೊಸಪೇಟೆ ಇವರಲ್ಲಿ ಓ.ಎಸ್.ನಂ.220/2002 ಸಲ್ಲಿಸಿದ್ದು, ಪ್ರತಿವಾದಿ-3 ರವರು ಸಹ ದಾವೆಯನ್ನು ಹೂಡಿದ್ದು, ಸದರಿ ಅಪೀಲು ವಜಾಗೊಳಿಸಿರುವುದಾಗಿ, ಹಾಗೂ ವಾದಿಯು ಸದರಿ ಅಪೀಲಿನ ಸ್ವರೂಪವನ್ನು ಹಾಗೂ ಸದರಿ ಅಪೀಲನ್ನು ಯಾವ ಉದ್ದೇಶಕ್ಕಾಗಿ ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುವುದಾಗಿ ತಿಳಿಸಿರುವುದಿಲ್ಲವೆಂದು ಹಾಗೂ ಸದರಿ ವಾದಿಯು ತಹಶೀಲ್ದಾರರು, ಹೊಸಪೇಟೆ ಇವರಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಸಂಗತಿಗಳ ಬಗ್ಗೆ ಮುಚ್ಚಿಟ್ಟು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.
7. ವಾದಿಯು ಪ್ರತಿವಾದಿ-2 ರ ಪರ ನೋಂದಾಯಿಸಿರುವ ಕ್ರಯ ಪತ್ರವನ್ನು ಖಂಡಿಸಿರುವುದಿಲ್ಲವೆಂದು, ದಿನಾಂಕ:05.05.2015 ರ ಕ್ರಯ ಪತ್ರದ ಬಗ್ಗೆ ಯಾವುದೇ ವಿವಾದ ಇರುವುದಿಲ್ಲವೆಂದು, ಬಾದಿತಗೊಂಡ ವ್ಯಕ್ತಿಯು ತಮ್ಮ ಹಕ್ಕಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಮೊರೆಹೋಗಬೇಕೆಂದು, ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರು ಮಾಡಿರುವ ಆದೇಶವು ಸರಿಯಿರುವುದಾಗಿ ತಿಳಿಸಿರುತ್ತಾರೆ.
8. ಸದರಿ ವ್ಯಾಜ್ಯದ ಜಮೀನು ನೋಂದಾಯಿತ ಕ್ರಯ ದಸ್ತಾವೇಜಿನ ಪ್ರಕಾರ ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರತಿವಾದಿ-3 ರವರಿಗೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿಕೊಂಡು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ಪ್ರಶ್ನಿತ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ತಕರಾರು/38/2015-16 ದಿನಾಂಕ:23.11.2015 ವನ್ನು ಸಲ್ಲಿಸಿದ್ದು, ಸದರಿ ಆದೇಶದಲ್ಲಿ ಸದರಿ ವ್ಯಾಜ್ಯದ ಜಮೀನನ್ನು ಡಾ.ನಂ.246/2015-16 ದಿನಾಂಕ:05.05.2015 ರ ಪ್ರಕಾರ ಕ್ರಯದಾರರಾದ ಶ್ರೀ ನೀಲಕಂಠರೆಡ್ಡಿ ತಂದೆ ಪಿ.ರಾಮದಾಸರೆಡ್ಡಿ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿ, ಪ್ರತಿವಾದಿಗಳು ತಮ್ಮ ಹಕ್ಕನ್ನು ಸಾಧಿಸಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೊರೆಹೊಗುವಂತೆ ಆದೇಶವಾಗಿರುವುದು ಕಂಡುಬಂದಿರುತ್ತದೆ.
2. ಸದರಿ ವ್ಯಾಜ್ಯದ ಸ.ನಂ.162/ಎ2 ವಿಸ್ತೀರ್ಣ: 04 ಎಕರೆ 72 ಸೆಂಟ್ಸ್ ಜಮೀನು ಕುರುಬರ ಈಶ್ವರಮ್ಮ ಇವರ ಹೆಸರಿನಲ್ಲಿ ಇರುವುದು ಕಂಡುಬಂದಿರುತ್ತದೆ.

3. ನೋಂದಾಯಿತ ವಿಕ್ರಯ ದಸ್ತಾವೇಜನ್ನು ಲಗತ್ತಿಸಿದ್ದು, ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:246/2015-16 ದಿನಾಂಕ:05.05.2015 ರ ಮೂಲಕ ರೂ.5,70,000/- ಗಳಿಗೆ ಶ್ರೀಮತಿ ಈಶ್ವರಮ್ಮ ಗಂಡ ಗೂಳಪ್ಪ ಇವರು ಶ್ರೀ ಪಿ.ನೀಲಕಂಠರೆಡ್ಡಿ ತಂದೆ ಪಿ.ರಾಮದಾಸ ರೆಡ್ಡಿ ಇವರಿಗೆ ಸ.ನಂ.162/ಎ2 ವಿಸ್ತೀರ್ಣ: 04 ಎಕರೆ 72 ಸೆಂಟ್ಸ್ ಜಮೀನನ್ನು ಕ್ರಯಕ್ಕೆ ನೀಡಿರುವ ಬಗ್ಗೆ ನಮೂದು ಇರುತ್ತದೆ.
4. ಸದರಿ ಪ್ರಕರಣದಲ್ಲಿ ವಾದಿಗಳ ಪರ ವಕೀಲರು ಸತತವಾಗಿ ವಿಚಾರಣೆ ಗೈರಾಗಿರುರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಮೆಟ್ರಿ ಗ್ರಾಮದ ಸ.ನಂ.162/ಎ2 ವಿಸ್ತೀರ್ಣ: 04 ಎಕರೆ 72 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ತಕರಾರು/38/2015-16 ದಿನಾಂಕ:23.11.2015 ವನ್ನು ಎತ್ತಿಹಿಡಿಯುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ವಿಕ್ರಯ ದಸ್ತಾವೇಜು ಸಂಖ್ಯೆ:246/2015-16 ದಿನಾಂಕ:05.05.2015 ರ ಪ್ರಕಾರ ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹಾಗೂ ವಾದಿಗಳು ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಮೆಟ್ರಿ ಗ್ರಾಮದ ಸ.ನಂ.162/ಎ2 ವಿಸ್ತೀರ್ಣ: 04 ಎಕರೆ 72 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಸಂ/ಕಂ/ಪಹಣಿ/ತಕರಾರು/38/2015-16 ದಿನಾಂಕ:23.11.2015 ವನ್ನು ಎತ್ತಿಹಿಡಿಯುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ವಿಕ್ರಯ ದಸ್ತಾವೇಜು ಸಂಖ್ಯೆ:246/2015-16 ದಿನಾಂಕ:05.05.2015 ರ ಪ್ರಕಾರ ಪ್ರತಿವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ ಹಾಗೂ ವಾದಿಗಳು ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಸೂಚಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:08.09.2016ರಂದುತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

<u>ಪ್ರತಿಯನ್ನು</u>:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.